ಕರ್ನಾಟಕ ವಿಧಾನಸಭೆ

ಮಂಗಳವಾರ 2ನೇ ಆಗಸ್ಟ್ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರ

(ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು)

ಶ್ರೀ ಸಿದ್ಧರಾಮಯ್ಯನವರನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ವಜಾಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದರ ಕುರಿತು.

ಅಧ್ಯಕ್ಷರು : ಈಗ ವರದಿಗಳನ್ನು ಒಪ್ಪಿಸುವುದು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ಶ್ರೀ ಸಿದ್ಧರಾಮಯ್ಯನವರನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ವಜಾ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದರ ಕುರಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ಮನವಿ ಮಾಡುತ್ತಿದ್ದೇನೆ, ಈ ರಾಜ್ಯದಲ್ಲಿ ಸರ್ಕಾರ ಎನಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸದನ ನಡೆಯುತ್ತಿದೆ, ಒಂದು ಕಡೆ ಪಕ್ಷಗಳ ಮುಖಂಡರುಗಳು ಬದಲಾವಣೆಯಾಗುತ್ತಿದ್ದಾರೆ.ಮಾನ್ಯ ಉಪ ಮುಖ್ಯಮಂತ್ರಿಗಳ ವಿಚಾರವೇನು? ಒಂದು ದೊಡ್ಡ ಸಮಸ್ಯೆ ಇಡೀ ರಾಜ್ಯಾದ್ಯಂತ ಆರಂಭವಾಗಿದೆ. ಪತ್ರಿಕೆಗಳಲ್ಲಿ 'ಸಿದ್ಧರಾಮಯ್ಯ ವಿರುದ್ಧ ಅವಿಶ್ವಾಸ ನಿರ್ಣಯ' ಎಂದು ಬಂದಿದೆ. ಮತ್ತು ಬೇರೆ ಮುಖಂಡರುಗಳನ್ನು ಆಯ್ಕೆ ಮಾಡಿದ್ದಾರೆ ಎಂದು ಬಂದಿದೆ. ಇದನ್ನೆಲ್ಲಾ ನೋಡಿದಾಗ ಆಂತರಿಕವಾಗಿ ಪ್ರಜಾತಂತ್ರ ವ್ಯವಸ್ಥೆ ಎನಾಗಿದೆ? ಎನು ನಡೆಯುತ್ತಿದೆ?

(ಗೊಂದಲ)

ಅಧ್ಯಕ್ಷರು : ದಯಾಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ : ಸರ್ಕಾರ ಬದ್ಧ ಇದೆ, ಸರ್ಕಾರ ಗಟ್ಟಿಯಾಗಿ ಇದೆ. ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ. . .

(ಗೊಂದಲ)

ಅಧ್ಯಕ್ಷರು : ಮಾನ್ಯ ಜ್ಞಾನೇಂದ್ರರವರೆ, ದಯಮಾಡಿ ಕುಳಿತುಕೊಳ್ಳಿ ಇದೇನಿದು ಎಷ್ಟು ಸಾರಿ ಹೇಳಬೇಕು. ಇಲ್ಲೆ ನಾವು ರಾಜಕೀಯ ಪಕ್ಷಗಳ ಬೆಳವಣಿಗೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಇವತ್ತಿನ ಅಜೆಂಡಾದ ಮೇಲೆ ಮಾತನಾಡೋಣ. ದಯಮಾಡಿ ಮೊದಲು ಕುಳಿತುಕೊಳ್ಳಿ. I am on my legs.ಈಗ ನಿಮ್ಮ ನಿಮ್ಮ ಅನಿಸಿಕೆಗಳನ್ನೆಲ್ಲಾ ಹೊರಗಡೆ ಹೇಳಿ ಯಾವುದಾದರೂ ಅದೂ, ಇದೂ ಇದ್ದರೆ. ನಾನು ಕೇಳುವುದೇನೆಂದರೆ, ಇವತ್ತು ಕಲಾಪವನ್ನು ನಡೆಸತಕ್ಕಂಥ ರೀತಿಯಲ್ಲಿ ಬಹಳಷ್ಟು ಬಿಲ್ಸ್ ಇವೆ. ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಮುಖ್ಯಮಂತ್ರಿಗಳ ಪರಿಸ್ಥಿತಿ ಎನು? ಅವರ ಸ್ಥಾನ ಎನು ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಅವರು ಈ ಏನು ತಪ್ಪು ಮಾಡಿದ್ದಾರೆ? ಈಗ ಅವರು ಮಾಡಿರುವ ತಪ್ಪೇನು? ಏಕೆ ಶಿಕ್ಷೆ ಕೊಡಬೇಕು? ಅವರು ಈ ರಾಜ್ಯಕ್ಕೆ ಏನು ಮಾಡಿದ್ದಾರೆ? ಸರ್ಕಾರಕ್ಕೆ ಎನು ಮಾಡಿದ್ದಾರೆ? ಅದರ ಬಗ್ಗೆ ಹೇಳಿಕೆ ಕೊಡಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಸಿದ್ಧರಾಮಯ್ಯನವರ ಮೇಲೆ ಏನು ಆಪಾದನೆ ಬಂದಿದೆ ಅದನ್ನು ಬಹಿರಂಗ ಪಡಿಸಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ಇಲ್ಲಿ ಸದನ ನಡೆಯುತ್ತಿದೆ, ಸದನ ನಡೆಯುತ್ತಿರಬೇಕಾದರೆ ಆಚೆ ಕಡೆ ಡೆಪ್ಯೂಟಿ ಸಿ. ಎಂ. ಅವರನ್ನು ತೆಗೆದು ಹಾಕುತ್ತೇವೆ ಎಂದು ಹೇಳಿದ್ದಾರೆ. ಇದು ಸದನಕ್ಕೆ ಒಂದು ರೀತಿ ಅಗೌರವ ಮಾಡಿದ ಹಾಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಜಾತಂತ್ರ ವ್ಯವಸ್ಥೆ ಕಗ್ಗೊಲೆಯಾಗಿದೆ. ಮಾನ್ಯ ಸಿದ್ಧರಾಮಯ್ಯನವರು ವಜಾ ಆಗತಕ್ಕಂಥ ಕಾರಣಗಳೇನಿತ್ತು? ಅವರು ಈ ರಾಜ್ಯಕ್ಕೆ ಮಾಡಿರತಕ್ಕಂಥ ಅಪರಾಧವೇನು? ಅವರು ಒಂದು ಹೇಳಿಕೆ ಕೊಡಿ. ಅದು ತೀರ್ಮಾನವಾಗಲೇಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇದು ಯಾವುದೇ ಪಕ್ಷದ ಪ್ರಶ್ನೆ ಖಂಡಿತ ಅಲ್ಲ, ಇದನ್ನು ಇವತ್ತು ಇಡೀ ಕರ್ನಾಟಕ ರಾಜ್ಯದ ಜನ ನೋಡುತ್ತಿದ್ದಾರೆ. ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ಮಾನ್ಯ ಸಿದ್ಧರಾಮಯ್ಯನವರನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ಕಿತ್ತು ಹಾಕುತ್ತಿದ್ದೇವೆ, ಈ ಮಾತನ್ನು ತುಂಬಾ ಸ್ಪಷ್ಟವಾಗಿ ಆ ಪಕ್ಷದ ನಾಯಕರೆಲ್ಲಾ ಹೇಳುತ್ತಿದ್ದಾರೆ ಹೀಗಾಗಿ ಮಾನ್ಯ ಸಿದ್ಧರಾಮಯ್ಯನವರನ್ನು ಪಾರ್ಟಿಯಿಂದ ತೆಗೆದು ಹಾಕುವುದಕ್ಕೆ ಕಾರಣವೇನು? ಮಂತ್ರಿಮಂಡಲದಿಂದ ಕಿತ್ತು ಹಾಕಬೇಕೆಂದು ರೆಕಮೆಂಡ್ ಮಾಡುತ್ತಿರುವುದಕ್ಕೆ ಕಾರಣವೇನು? ಅವರೇನು ಮಹಾಪರಾಧ ಮಾಡಿದ್ದಾರೆ? ಇದರ ಬಗ್ಗೆ ಇಡೀ ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಕೊಡಲಿಲ್ಲವೆಂದರೆ, ಈ ಸಮ್ಮಿಶ್ರ ಸರ್ಕಾರದ ಬಗ್ಗೆ ಇರುವಂತಹ ಗೌರವ ಈಗಾಗಲೇ ಹೊರಟು ಹೋಗಿದೆ ಈ ಸರ್ಕಾರ ಮುಂದುವರೆಯುವುದಕ್ಕೆ ಅಧಿಕಾರವೇ ಇಲ್ಲ. ಹೀಗಾಗಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಉಪ ಮುಖ್ಯಮಂತ್ರಿಗಳ ವಿಚಾರದಲ್ಲಿ ಗೊಂದಲ ಇದೆ. ಆ ಗೊಂದಲವನ್ನು ನಿವಾರಣೆ ಮಾಡುವುದಕ್ಕೆ. . .

(ಗೊಂದಲ)

ಅಧ್ಯಕ್ಷರು : ದಯಾಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ : ಇಲಾಖೆಗಳಲ್ಲಿ ಅಧಿಕಾರಿಗಳು ಮೊದಲೇ ಕೆಲಸ ಮಾಡುವುದಿಲ್ಲ ಅವರಿಗೆ ಈ ಸರ್ಕಾರದಿಂದ ನಿರ್ದೇಶನ ಸಿಗುತ್ತಿಲ್ಲ. ಉಪ ಮುಖ್ಯಮಂತ್ರಿಗಳನ್ನು ಪದಚ್ಯುತಿ ಮಾಡುತ್ತೇವೆ ಎಂದು ದಿನಕ್ಕೊಂದು ಪತ್ರಿಕಾ ಹೇಳಿಕೆಗಳು, ದಿನಕ್ಕೊಂದು ಸುದ್ದಿಗಳು ಸರ್ಕಾರವನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಇಡುತ್ತದೆ? ನಮ್ಮ ಇಡೀ ಕರ್ನಾಟಕ ರಾಜ್ಯದ ಡೆವಲಪ್‌ಮೆಂಟ್ ವರ್ಕ್ಸ್ ಎಲ್ಲಾ ಇವತ್ತು ಹಾಳಾಗಿ ಹೋಗಿದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಸಿದ್ಧರಾಮಯ್ಯನವರು ಈ ಸದನ ಕಂಡ, ಒಳ್ಳೆಯ ಅರ್ಥ ಸಚಿವರು, ಸನ್ಮಾನ್ಯ ಸಿದ್ಧರಾಮಯ್ಯನವರು ಈ ಸದನದಲ್ಲಿ 9ನೇ ಬಾರಿ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ನಮ್ಮ ಕರ್ನಾಟಕ ನಾಡಿನ ಪುಣ್ಯ, ಮಾನ್ಯ ಸಿದ್ಧರಾಮಯ್ಯನವರು ಮಂತ್ರಿಯಾಗುವುದು, ಎಂದು ಹಾಡಿ, ಹೊಗಳಿ, ಕೊಂಡಾಡಿ, ಈಗ ವಿನಾಕಾರಣ ಅದು ಈ ಶಾಸನ ಸಭೆಯು ನಡೆಯಬೇಕಾದರೆ, ಇಷ್ಟೊಂದು ಅವಮಾನ. ಒಂದನೆಯ ಅವಮಾನ ಅಂದು ಮಾನ್ಯ ರಾಜಶೇಖರಮೂರ್ತಿಯವರಿಗೆ ಆಯಿತು. ಇವತ್ತು ಎರಡನೆಯ ಅವಮಾನ ಮಾನ್ಯ ಸಿದ್ಧರಾಮಯ್ಯನವರಿಗೆ ಈ ರಾಜ್ಯದಲ್ಲಿ ಆಗುತ್ತದೆ, ಈಗ ನಿಷ್ಟೆ, ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡುವಂಥಾದ್ದು ತಪ್ಪು ಎಂಬುದು ಇವತ್ತು ಪ್ರೂವ್ ಆಗಿದೆ. ನಾವು ಅಷ್ಟೆಲ್ಲಾ ಮಾತನಾಡಿದೆವು. ನಾನು ಪಕ್ಷದ ವಿಷಯದ ಬಗ್ಗೆ ಹೇಳಲು ಹೋಗುವುದಿಲ್ಲ. ಮಾನ್ಯ ಸಿದ್ಧರಾಮಯ್ಯನವರನ್ನು ಮುಂದಿಟ್ಟು, ಇವರ ಹೆಸರಲ್ಲಿ ಪ್ರಚಾರವನ್ನು ಮಾಡಿ ಇವತ್ತು ಮಾನ್ಯ ಸಿದ್ಧರಾಮಯ್ಯನವರು ಎಲ್ಲಿಗೆ ಹೋಗುತ್ತಾರೆಂಬುದನ್ನು ನಾವು ಕೇಳುವ ಹಾಗೆ ಆಗಿದೆ. ಇದು ನಿಜವಾಗಿಯೂ ಶಾಸನಸಭೆಗೆ ಗೌರವವನ್ನು ತರುವಂತಹ ಸ್ಥಿತಿ ಅಲ್ಲ. ಇಲ್ಲಿ ನಾವು ಒತ್ತಾಯ ಮಾಡುತ್ತಿದ್ದೇವೆ. ಏತಕ್ಕೆ ಇದೆಲ್ಲಾ ಆಗಿದೆಯೆಂಬುದನ್ನು ತಿಳಿದುಕೊಳ್ಳುವಂತಹ ಹಕ್ಕು ನಮಗೆ ಇದೆ. ಅವರು ಈ ರಾಜ್ಯದ ಅರ್ಥ ಸಚಿವರು, ಅವರು ಇಟ್ಟಿರುವಂತಹ ಕಾರ್ಯಕ್ರಮಗಳು ಜಾರಿಯಾಗಬೇಕಾಗಿದೆ. ಅವರು ಇಟ್ಟಿರುವ ಕಾರ್ಯಕ್ರಮಗಳ ಹಣೆಬರಹ ಏನೆಂಬುದು ನಮಗೆ ಗೊತ್ತಾಗಬೇಕಾಗಿದೆ. ಇಷ್ಟೆಲ್ಲಾ ಹೋರಾಟ ಮಾಡುತ್ತಿದ್ದಂತಹ ಒಬ್ಬ ಮನುಷ್ಯನನ್ನು, ಏಕಾಏಕಿ ಈ ರೀತಿ ಮಾಡುತ್ತಿದ್ದಿರೆಂದರೆ, ಅದು ಎಕೆಂಬುದನ್ನು ನಮಗೆ ಹೇಳಬೇಕಲ್ಲಾ? ಇಲ್ಲಿ ಒಬ್ಬ ಮಂತ್ರಿ ಹೋಗಬೇಕಾದರೆ, ಒಬ್ಬ ಮಂತ್ರಿ ಬರಬೇಕಾದರೆ ತಿಳಿದುಕೊಳ್ಳುವಂತಹ ಜವಾಬ್ದಾರಿಯೂ ಈ ಸದನಕ್ಕೆ ಇದೆ. ದಯಾಮಾಡಿ ಮಾನ್ಯ ಸಿದ್ಧರಾಮಯ್ಯನವರು ಹೇಳಿಕೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ ಈಗ ಮಾನ್ಯ ಸಿದ್ಧರಾಮಯ್ಯನವರನ್ನು ನಾವು ಇಲ್ಲಿ ಒಬ್ಬ ವ್ಯಕ್ತಿಯನ್ನಾಗಿ ನೋಡುತ್ತಿಲ್ಲ. ಅವರು ಈ ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಈಗ ನಡೆದಿರುವಂತಹ ಪರಿಣಾಮಗಳು ಈ ಸದನದ ಮೇಲೆ ಪರಿಣಾಮ ವಾಗುತ್ತದೆ. ಸರ್ಕಾರದ ಮೇಲೆ ಆಡಳಿತದ ಮೇಲೆ ಪರಣಾಮವಾಗುತ್ತದೆ. ಒಬ್ಬ ನಿಷ್ಟೆಯಿಂದ,

ಪ್ರಾಮಾಣಿಕತೆಯಿಂದ, ಕೆಲಸವನ್ನು ಮಾಡುವಂತಹ ಒಬ್ಬ ಉಪ ಮುಖ್ಯಮಂತ್ರಿಯವರ ಬಗ್ಗೆ ಏಕಾಏಕಿ ಹಠಾತ್ತಾಗಿ ಈ ರೀತಿ ತೀರ್ಮಾನವನ್ನು ತೆಗೆದುಕೊಂಡು, ಈ ರೀತಿ ಮಾಡಿದಾಗ ಇದು ಇಡೀ ರಾಜ್ಯದ ಮೇಲೆ ಅದು ಪರಿಣಾಮವಾಗುತ್ತದೆ. ಆಡಳಿತದ ಮೇಲೆ ಪರಿಣಾಮವಾಗುತ್ತದೆ. ಇಡೀ ಪ್ರಜಾತಂತ್ರವ್ಯವಸ್ಥೆಯ ಬಗ್ಗೆ ಜನರಿಗೆ ಅಪನಂಬಿಕೆ ಉಂಟಾಗುತ್ತದೆ. ಎಕೆಂದರೆ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಮತ್ತು ಇಲ್ಲಿ ಸದನ ನಡೆಯುತ್ತಿದೆ. ಅವರು ಈ ರಾಜ್ಯದ ಹಣಕಾಸಿನ ಮಂತ್ರಿಗಳು, ಇನ್ನು ಬಿಲ್‌ಗಳು ಪಾಸಾಗಬೇಕಾಗಿದೆ. ಇನ್ನು ಸಪ್ಲಿಮೆಂಟರಿ ಬಿಲ್ ಪಾಸ್ ಆಗಬೇಕಾಗಿದೆ. ಹಲವಾರು ಕಾಯಿದೆಗಳು ಇವೆ, ಇಂತಹ ಸಂದರ್ಭದಲ್ಲಿ ಈ ರೀತಿ ಏನು ನಡೆದಿದೆ, ಇದನ್ನು ತಿಳಿದುಕೊಳ್ಳುವಂತಹ ಹಕ್ಕು ನಮಗೆ ಇದೆ. ಇದು ಸದನದ ಹಕ್ಕು, ಏಕೆಂದರೆ ಮಾನ್ಯ ಸಿದ್ಧರಾಮಯ್ಯನವರು ಈ ಸದನದ ಸದಸ್ಯರು ಆಗಿದ್ದಾರೆ. ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಇದನ್ನು ತಿಳಿದುಕೊಳ್ಳುವಂತಹ ಹಕ್ಕು ನಮಗೆ ಇದೆ. ಅದು ಸ್ಟೇಟ್‌ಮೆಂಟ್ ಯಾರು ಕೊಡುತ್ತಾರೆಂಬ ಪ್ರಶ್ನೆಯಲ್ಲ. ಈ ಸದನಕ್ಕೆ ಹಕ್ಕು ಇದೆ. ಆದುದರಿಂದ ಈ ಹಕ್ಕನ್ನು ರಕ್ಷಣೆ ಮಾಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್‌ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್. ವಿ. ದೇಶಪಾಂಡೆಯವರು ಸರ್ಕಾರ ಭದ್ರವಾಗಿದೆ, ಇದು ಆಂತರಿಕ ಸಮಸ್ಯೆ ಎಂದು ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ ಇಡೀ ರಾಜ್ಯದ ಜನತೆಗೆ ಅದನ್ನು ತಿಳಿದುಕೊಳ್ಳುವಂತಹ ಅಧಿಕಾರ ಇವತ್ತು ಇದೆ. ನಿಮಗೆ ಸರ್ಕಾರ ನಡೆಸುತ್ತೇವೆದು ತಿಳಿದುಕೊಂಡು ಇಲ್ಲಿ ದಿನ ಬೆಳಿಗ್ಗೆ ಅದರೆ ಪತ್ರಿಕೆಯಲ್ಲಿ ಜಗಳವಾಡುವುದು, ಬರುವಂಥಾದ್ದು ಇದು ಇದ್ದರೆ ಮೊನ್ನೆ ಬಜೆಟ್ ಮಂಡನೆಯಾಗುವ ಮೊದಲೇ, ಅವರನ್ನು ಕಿತ್ತು ಹಾಕಬೇಕಾಗಿತ್ತು. ಅವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಮೊನ್ನೆ ಇಷ್ಟೆಲ್ಲಾ ಕನ್ಸೆಷನ್ ಅವರು ಕೊಟ್ಟರು. ಅದನ್ನು ಇನ್ನೊಬ್ಬರು ಬಂದು ಬದಲಾವಣೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಇದು ಆಡಳಿತದ ಮೇಲೆ ಪರಿಣಾಮ ಎಷ್ಟು ಆಗುತ್ತದೆಂಬ ಬಗ್ಗೆ ಆಲೋಚನೆಯನ್ನು ಮಾಡದೇ, ಸಿಕ್ಕಾಪಟ್ಟೆ, ಬೇಕಾದಹಾಗೆ ಮಾಡುವಂತಹ ಪರಿಸ್ಥಿತಿ ಬಂದಾಗ, ನಿಮಗೆ ಇಲ್ಲಿ ಕುಳಿತುಕೊಳ್ಳುವ ಅಧಿಕಾರವೇ ಇಲ್ಲ. ಜನರು ಯಾವಾಗ ನಿಮ್ಮನ್ನು ಇಲ್ಲಿ ಕೂರಿಸಿದ್ದಾರೆ, ಜನರು ಸಂಪೂರ್ಣವಾಗಿ ಇಲ್ಲಿ ನಿಮ್ಮನ್ನು ಕೂರಿಸಿಲ್ಲ ಯಾವುದೋ ಒಂದು ಕಾರಣಕ್ಕಾಗಿ ನೀವು ಇಬ್ಬರೂ ಸೇರಿ ಸರ್ಕಾರವನ್ನು ಮಾಡುವ ಪರಿಸ್ಥಿತಿ ಬಂತು. ಅದು ಕೇವಲ ಅವರನ್ನು ಹೊರಗೆ ಇಡುವುದಕ್ಕೆ ಎಂದು ಮಾಡಿದ್ದೀರಿ. ಈಗ ಯಾರನ್ನು ಹೊರಗೆ ಇಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಿ. ಈಗ ಬಿ. ಜೆ. ಪಿ. ಯವರನ್ನು ಹೊರಗೆ ಇಟ್ಟು ಆಯಿತು. ಇನ್ನು ಇನ್ನೊಂದು ಗುಂಪನ್ನು ಹೊರಗಿಟ್ಟು, ಹೀಗೆ ಎಷ್ಟು ಜನರನ್ನು ಯಾವ್ಯಾವ ಕಾರಣಕ್ಕಾಗಿ, ಈಗ ಹೊರಗಿಡುತ್ತೀರಿ ಇನ್ನೂಂದು ಆಯಿತು. ಇದು ನಂತರ ಒಂದು ವಿಸ್ತರಣೆಯಾಗುತ್ತದೆ. ಮಾನ್ಯ ಸಿದ್ಧರಾಮಯ್ಯನವರು, ಡಾ ಹೆಚ್. ಸಿ. ಮಹದೇವಪ್ಪನವರು, ಇನ್ನೊಬ್ಬರು ಹೋದರು. ಮುನಃ ವಿಸ್ತರಣೆಯಾದರೆ, ಯಾರಿಗೆ ಸಿಗುವುದಿಲ್ಲ, ಅವರದ್ದು ಇನ್ನೊಂದು ಗುಂಪು ಆಗುತ್ತದೆ. ಈ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂಥಾದ್ದು. ನಾವು ಎಲ್ಲಾದರಲ್ಲೂ ಬುದ್ಧಿಯನ್ನೂ ಕಲಿಯುತ್ತೇವೆ. ಈ ರಾಜಕೀಯದಲ್ಲಿ ನಾವು

ಬುದ್ದಿಯನ್ನು ಕಲಿಯುವಂಥಾದ್ದು, ನನಗೆ ಈ ಹಿಸ್ಟರಿ ನೆನಪು ಇದೆ. ಮಾನ್ಯ ದಂಡವತೆಯವರು ಪಾರ್ಲಿಮೆಂಟ್‌ನಲ್ಲಿ ವಿ. ಪಿ. ಸಿಂಗ್‌ರವರ ಸರ್ಕಾರವನ್ನು ತೆಗೆಯುವಾಗ ಅಂದಿನ ಮಾಜಿ ಪ್ರಧಾನಮಂತ್ರಿಯವರು ಹೇಳಿದರು. "Mr. Chandrashekahar, history will repeat. When it repeates, it will repeat with vengeance." ಎಂದು ಹೇಳಿದರು. ಅದು ಆಗುತ್ತದೆಂಬುದು ನನ್ನ ಅಭಿಪ್ರಾಯ. ದಯವಿಟ್ಟು ಏನು ಆಗುತ್ತಿದೆಯೆಂಬುದು ಸದನದ ಗಮನಕ್ಕೂ ತರಬೇಕಾಗುತ್ತದೆ. ನಿಮ್ಮ ಆಂತರಿಕ ಕಲಹಗಳು ಇದ್ದರೆ, ನೇರವಾಗಿ ಚುನಾವಣೆಗೆ ಹೋಗಿ, ಜನರು ಪುನಃ ಉತ್ತರವನ್ನು ಕೊಡಲಿ ಇಲ್ಲಿ ಯಾರೂ ಆಡಳಿತವನ್ನು ಮಾಡಬೇಕಾಗುತ್ತದೆಂಬುದನ್ನು ಕೊಡಲಿ. ದಿನನಿತ್ಯ ಜನರು ನಮ್ಮನ್ನು ಕೇಳುತ್ತಾರೆ ಇಲ್ಲಿ ಎನಾಗುತ್ತದೆಂಬುದನ್ನು, ಈ ಒಂದು ಪರಿಸ್ಥಿತಿಯಲ್ಲಿ ಆಡಳಿತವನ್ನು ಮಾಡುವುದನ್ನು ಬಿಟ್ಟು, ನಿಮ್ಮ ನಿಮ್ಮ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ 24ಗಂಟೆಗಳ ಕಾಲವನ್ನು ವ್ಯಯ ಮಾಡಬೇಡಿ. ದಯವಿಟ್ಟು ಇದರ ಬಗ್ಗೆ ಇತ್ಯರ್ಥವಾಗಬೇಕಾಗುತ್ತದೆ. ಇಲ್ಲಿ ಅನೇಕ ಬಿಲ್‌ಗಳು ಪಾಸು ಆಗಬೇಕಾಗಿದೆ. ಇಲ್ಲಿ ಬಿಲ್ ಪಾಸು ಮಾಡುವ ಬಗ್ಗೆ, ಇಲ್ಲಿ ನಿನ್ನೆಯಿಂದ ಇನ್ನೊಂದು ಸುದ್ದಿ ಪ್ರಾರಂಭವಾಗಿದೆ. ಈ ಸದನ ಮುಂದಕ್ಕೆ ಹೋಗುತ್ತದೆಂದು; ತಾವು 5ನೇ ತಾರೀಖಿನವರೆಗೂ ಕಾರ್ಯಕ್ರಮಗಳನ್ನು ಹಾಕಿದ್ದೀರಿ. ನೀವು ಕಾರ್ಯಕ್ರಮಗಳನ್ನು ಹಾಕಿದ ಮೇಲೆ, ನಾವು ಮೊನ್ನೆ ದಿವಸ ಬಿಲ್ ಅನ್ನು ಪಾಸು ಮಾಡಿದ್ದೇವೆ. ಈ ಸದನವು 60 ದಿವಸಗಳ ಕಾಲ ನಡೆಯಬೇಕು ಅದನ್ನು ಕಡಿಮೆ ಮಾಡುವಂಥ ಅಧಿಕಾರವನ್ನು ತೆಗೆದಿದ್ದೇವೆ. ಇದನ್ನು ಕಡಿಮೆ ಮಾಡುವ ಅಧಿಕಾರ ಈಗ ಇಲ್ಲ. ಇದು ಜಾರಿಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಒಂದು ಕಾಯಿದೆ ಬಂದಮೇಲೆ, ಪಾಸು ಮಾಡಿದಮೇಲೆ, We are morally bound. ಅದಕ್ಕಿಂತ ಮುಂದೆ ಹೋಗುವಂತಹ ಪರಿಸ್ಥಿತಿಯನ್ನು ತರಬಾರದು. ಎಲ್ಲಾ ಕಾರ್ಯಕಲಾಪಗಳು ನಿಯಮಾವಳಿಯಂತೆ ನಡೆಯಬೇಕಾಗುತ್ತದೆ. ಆಂತರಿಕ ಕಲಹಕ್ಕೋಸ್ಕರ ಸದನವನ್ನು ಮುಂದಕ್ಕೆ ಹಾಕುವಂತಹ ಕ್ರಮವನ್ನು ತೆಗೆದುಕೊಳ್ಳಬಾರದೆಂದು ನಾನು ಕೇಳಿಕ್ಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ನಾನು ತುಂಬಾ ಸ್ಪಷ್ಟವಾಗಿ ಹೇಳುವುದೆನೆಂದರೆ, ಹಿಂದುಳಿದ ವರ್ಗದವರ ಮತವನ್ನು ತೆಗೆದುಕೊಳ್ಳಬೇಕೆಂಬ ಒಂದೇ ಒಂದು ಕಾರಣಕ್ಕೆ, ಮುಂದಿನ ಮುಖ್ಯಮಂತ್ರಿಯವರು ಮಾನ್ಯ ಸಿದ್ದರಾಮಯ್ಯನವರೆಂದು ಘೋಷಣೆಯನ್ನು ಮಾಡಿ, ಇವತ್ತು ಕರ್ನಾಟಕ ರಾಜ್ಯದಲ್ಲಿರುವಂತಹ ಹಿಂದುಳಿದವರನ್ನು, ದಲಿತರನ್ನು, ಆ ಒಂದು ಓಟು ಬ್ಯಾಂಕ್ ಆಗಿ ಮಾಡಿ, ಅವರಿಗೆ ದ್ರೋಹಮಾಡುವಂತಹ ಒಂದು ವ್ಯವಸ್ಥೆ, ಇಲ್ಲಿ ನೇರವಾಗಿ ಕಾಣುತ್ತಾ ಇದೆ. ಹಿಂದುಳಿದವರನ್ನು, ದಲಿತರನ್ನು, ಅವರನ್ನು ಮುಂದೆ ಬಿಟ್ಟು ಶೋ ಪೀಸ್ ರೀತಿಯಲ್ಲಿ ಇವತ್ತು ರಾಜಕೀಯ ಪಕ್ಷಗಳು ಬಳಸಿಕೊಳ್ಳುತ್ತಿವೆಯಲ್ಲಾ, ಇದು ಸರಿಯಲ್ಲ ಇದು ಕರ್ನಾಟಕ ರಾಜ್ಯದ ಇಡೀ ಜನತೆ ಈ ರೀತಿ ಹಿಂದುಳಿದ ವರ್ಗದವರನ್ನು, ದಲಿತರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆಂದು ಎಷ್ಟು ದಿವಸಗಳಿಂದ ಹೇಳಿಕೊಂಡು ಬಂದರು. ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಹತ್ತು ಬಾರಿ ಹೇಳಿದೆ, ಸಾರ್ವಜನಿಕ ಸಭೆಗಳಲ್ಲಿ ಹೇಳಿದೆ. ನಿಮಗೆ ದ್ರೋಹ ಮಾಡುತ್ತಿದ್ದಾರೆ, ಅನ್ಯಾಯ

ಮಾಡುತ್ತಿದ್ದಾರೆ. ನಿಮ್ಮನ್ನು ಮುಂದಿಟ್ಟು ಅನ್ಯಾಯ ಮಾಡುತ್ತಾರೆಂದು ನಾನು ಹೇಳುತ್ತಾ ಇದ್ದೆ. ಅವರು ಆಗ ಇಲ್ಲ ನನ್ನನ್ನೇ ಮಾಡುತ್ತಾರೆಂದು ಹೇಳಿದರು. ಆದರೆ ಕೇವಲ ದಲಿತರನ್ನು, ಹಿಂದುಳಿದವರನ್ನು ಅವರ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಒಂದು ಅಸ್ತ್ರವನ್ನು ಮಾಡಿಕೊಂಡಿದ್ದಾರಲ್ಲಾ, ಈ ರಾಜಕೀಯ ಪಕ್ಷಗಳು ಇವರಿಗೆ ಧಿಕ್ಕಾರವನ್ನು ಹೇಳುವಂತಹ ಸಂದರ್ಭ ಇನ್ನೂ ಮುಂದಿನ ದಿವಸಗಳಲ್ಲಿ ಬರುತ್ತದೆ. ಹೀಗಾಗಿ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಕೇವಲ ದಲಿತರಿಗೆ, ಹಿಂದುಳಿದವರಿಗೆ ಅನ್ಯಾಯವನ್ನು ಮಾಡುತ್ತಿರುವಂತಹ ಈ ಸರ್ಕಾರದ ಬಗ್ಗೆ, ಒಂದು ಅಸ್ತ್ರವನ್ನು ಮಾಡಿಕೊಂಡಿದ್ದಾರಲ್ಲಾ, ಈ ರಾಜಕೀಯ ಪಕ್ಷಗಳು ಇವರಿಗೆ ಧಿಕ್ಕಾರವನ್ನು ಹೇಳುವಂತಹ ಸಂದರ್ಭ ಇನ್ನೂ ಮುಂದಿನ ದಿವಸಗಳಲ್ಲಿ ಬರುತ್ತದೆ. ಹೀಗಾಗಿ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಕೇವಲ ದಲಿತರಿಗೆ, ಹಿಂದುಳಿಕಿದವರಿಗೆ ಅನ್ಯಾಯವನ್ನು ಮಾಡುತ್ತಿರುವಂತಹ ಈ ಸರ್ಕಾರದ ಬಗ್ಗೆ, ಒಂದು ಅಸ್ತ್ರವನ್ನು ಮಾಡಿಕೊಂಡಿದ್ದಾರಲ್ಲಾ, ಈ ರಾಜಕೀಯ ಪಕ್ಷಗಳು ಇವರಿಗೆ ಧಿಕ್ಕಾರವನ್ನು ಹೇಳುವಂತಹ ಸಂದರ್ಭ ಇನ್ನೂ ಮುಂದಿನ ದಿವಸಗಳಲ್ಲಿ ಬರುತ್ತದೆ. ಹೀಗಾಗಿ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಕೇವಲ ದಲಿತರಿಗೆ, ಹಿಂದುಳಿದವರಿಗೆ ಅನ್ಯಾಯವನ್ನು ಮಾಡುತ್ತಿರುವಂತಹ ಈ ಸರ್ಕಾರದ ಬಗ್ಗೆ, ಒಂದು ಅಸ್ತ್ರವನ್ನು ಮಾಡಿಕೊಂಡಿದ್ದಾರಲ್ಲಾ, ಈ ರಾಜಕೀಯ ಪಕ್ಷಗಳು ಇವರಿಗೆ ಧಿಕ್ಕಾರವನ್ನು ಹೇಳುವಂತಹ ಸಂದರ್ಭ ಇನ್ನೂ ಮುಂದಿನ ದಿವಸಗಳಲ್ಲಿ ಬರುತ್ತದೆ. ಹೀಗಾಗಿ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಕೇವಲ ದಲಿತರಿಗೆ, ಹಿಂದುಳಿದವರಿಗೆ ಅನ್ಯಾಯವನ್ನು ಮಾಡುತ್ತಿರುವಂತಹ ಈ ಸರ್ಕಾರದ ಬಗ್ಗೆ, ಈ ಪಕ್ಷಗಳ ಬಗ್ಗೆ ಸರಿಯಾದಂತಹ ಉತ್ತರಗಳನ್ನು, ಬರುವಂತಹ ದಿವಸಗಳಲ್ಲಿ ರಾಜ್ಯದ ಜನರು ಕೊಡುತ್ತಾರೆಂಬ ಎಚ್ಚರಿಕೆಯನ್ನು ಕೂಡ ನಾನು ಆ ಪಕ್ಷದವರಿಗೆ ಹೇಳಲಿಚ್ಛಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನನ್ನದು ಒಂದು ಮಾತು. ಈ ವಿಚಾರವನ್ನು ನಾನೇ ಮೊದಲಿಗೆ ಪ್ರಾರಂಭ ಮಾಡಿರುವನು, ಅನ್ಯಾಯ ಎಲ್ಲಿ ನಡೆದಿದೆಯೆಂಬುದನ್ನು ಈ ಸದನದಲ್ಲಿ ಆರಂಭ ಮಾಡಿರುವವನು ನಾನೇ, ನಮಗೆ ಒಂದು ವಾರ, 15 ದಿವಸಗಳಿಂದ ಈ ರಾಜ್ಯದಲ್ಲಿ ಏನಾಗುತ್ತದೆಂಬುದು ನಮಗೆ ಯಾರಿಗೂ ಅರ್ಥವಾಗುತ್ತಿಲ್ಲ. ರಾತ್ರಿ ಇದ್ದಕ್ಕಿದ್ದ ಹಾಗೆ ನನಗೆ ಅನ್ನಿಸುತ್ತದೆ. ಇಡಿ ಅಮೀನ್ ಇದ್ದನಲ್ಲಾ ಆ ಸರ್ಕಾರ ಇದ್ದಾಗಲೂ ಈ ರೀತಿ ಆಗಲಿಲ್ಲ. ಕಾಲದಲ್ಲೂ ಮಿಲಿಟರಿ ಪ್ರಭುತ್ವದಲ್ಲೂ ಈ ರೀತಿ ಆಗಿರಲಿಲ್ಲ ಮಿಲಿಟರಿ ಪ್ರಭುತ್ವದಲ್ಲಿ ಆಂತರಿಕ ಪ್ರಜಾಸತ್ತೆ, ಪ್ರಜಾ ವ್ಯವಸ್ಥೆ ಮಾತು ಇವೆಲ್ಲಾ ಇದೆ. ಇವತ್ತು ಹುಬ್ಬಳಿಯಲ್ಲಿ ಒಂದು ಸಮಾವೇಶವನ್ನು ಮಾಡಿದ್ದೆ, ಅಲ್ಲಿಗೆ ಹೋದದ್ದೆ ಒಂದು ಅಪರಾಧವೆಂಬಂತೆ, ಹೊರಗೆ ಹಾಕುವಂಥಾದ್ದು ಅದು ಬೇರೆ ವಿಚಾರ. ನಾನು ತಮಗೆ ಏನು ಹೇಳುತ್ತಿದ್ದೆನೆಂದರೆ ಈ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ, ಅವರು ಮಾಡಿರತಕ್ಕಂಥ ಕೆಲಸ, ಈ ರಾಜ್ಯಕ್ಕೆ ಕೊಟ್ಟಿರುವಂಥಹ ಕೊಡುಗೆ, ಇವೆಲ್ಲವನ್ನು ಬದಿಗೊತ್ತಿ,

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಹೊರಗೆ ಹಾಕಿ

ಶ್ರೀ ಎಂ. ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ ಇದು ನಮ್ಮ ಪಕ್ಷದ ವಿಚಾರ. ರಾತ್ರೋರಾತ್ರಿ ಹೊಸ ನಾಯಕರನ್ನು ಈ ಸದನಕ್ಕೆ ಆಯ್ಕೆ ಮಾಡುವಂತಹ

ಉದ್ದೇಶವಾದರೂ ಏನು? ಹೊಸ ನಾಯಕರನ್ನು ಆಯ್ಕೆ ಮಾಡುವಂತಹ ಉದ್ದೇಶವಾದರೂ ಏನು? ಯಾವ ಸರ್ಕಾರದಲ್ಲೂ ಇದು ಇರಲಿಲ್ಲ. ಯಾವ ಕಾರಣಕ್ಕೆ ಆಯ್ಕೆ ಮಾಡಿದರು? ಅದು ಈ ರಾಜ್ಯದ ಐದೂವರೆ ಕೋಟಿ ಜನತೆಯ ಮುಂದೆ ಇದನ್ನು ಹೇಳಬೇಕಾಗಿದೆ. ಇದು ಸತ್ಯ ಬೀದಿಗೆ ಹೋಗೋಣ, ಇದರ ಬಗ್ಗೆ ಹೋರಾಟ ನಡೆಯಲಿ. ನಾವು ಎಲ್ಲಕ್ಕೂ ತಯಾರಾಗಿದ್ದೆವೆಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಈಗ ಏನಾಗಿದೆಯೆಂದರೆ, ರಾಜಕೀಯ ಬೆಳವಣಿಗೆಗಳು ಹೊರಗಡೆ ನಡೆಯುತ್ತಿರುವಂಥಾದ್ದನ್ನು ಇಲ್ಲಿ ಚರ್ಚೆಮಾಡುವುದು ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಮುಖ್ಯವಾಗಿ ಸನ್ಮಾನ್ಯ ಸಿದ್ಧರಾಮಯ್ಯನವರು, ಹಣಕಾಸಿನ ಸಚಿವರಾಗಿ, ಕಳೆದ 1415 ತಿಂಗಳುಗಳಲ್ಲಿ ಮಾಡಿದಂತಹ ಕೆಲಸ, ನಮ್ಮ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ತಂದು ತುಂಬಿರುವಂಥಾದ್ದು. ಇದರ ಬಗ್ಗೆ ಇಡೀ ರಾಜ್ಯದ ಜನತೆ ಅವರ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ನಾನು ಈ ಸದನದಲ್ಲಿ ನಿಂತುಕೊಂಡು ಅಬಕಾರಿಯಲ್ಲಿ ತಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ 900ಕೋಟಿ ರೂಪಾಯಿಗಳನ್ನು ಆದಾಯ ತರುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಹೊಸದಾಗಿ ತೆರಿಗೆ ಪದ್ಧತಿ ವ್ಯಾಟ್ ಜಾರಿಗೆ ಬಂದಮೇಲೆ, ಇಡೀ ದೇಶದಲ್ಲೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ತೆರಿಗೆಯನ್ನು ಸಂಗ್ರಹ ಮಾಡುವುದರಲ್ಲಿ ತಾವು ಯಶಸ್ವಿಯಾಗಿದ್ದೀರಿ. ಅಷ್ಟೆಲ್ಲಾ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ತೊಗಿಸಬೇಕೆಂದು ಇದ್ದರೂ ಕಳೆದ 4 ತಿಂಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಆಗಿಲ್ಲ. ನೀವು ಆ ಕೆಲಸವನ್ನು ಮಾಡಿ, ನಮ್ಮ ಶಾಸಕರು ಗೌರವದಿಂದ ರಸ್ತೆಯಲ್ಲಿ ಓಡಾಡುವಂತಹ ಪರಿಸ್ಥಿತಿಯನ್ನು ತಂದುಕೊಂಡಿದೆಯೆಂಬ ಮಾತನ್ನು ಇಲ್ಲಿ ಹೇಳಿದ್ದೆ. ಅವರು ಒಂದು ಕಡೆ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಸಂಗ್ರಹವಾಗುವುದರಲ್ಲಿ ಮಾಡಿರುವಂತಹ ಸಾಧನೆ, ಇನ್ನೊಂದು ಕಡೆ ಕಳೆದ 4 ತಿಂಗಳುಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆಯಾಗದೇ ನಾವು ಶಾಸಕರು ತಲೆ ಎತ್ತುವುದಕ್ಕೆ ಆಗದೇ, ಇರುವಂತಹ ಉಸಿರು ಕಟ್ಟುವಂತಹ ಪರಿಸ್ಥಿತಿ ಆಗಿದೆ. ಈ ಸರ್ಕಾರ ಸಂಬಳ, ವರ್ಗಾವಣೆಯನ್ನು ಬಿಟ್ಟು ಏನು ಮಾಡಲಿಲ್ಲ, ಇದು ಒಂದು ವಾದ. ಇವತ್ತು ಪ್ರಸ್ತುತ ಪ್ರಸ್ತಾಪವಾಗುತ್ತಿರುವುದು ಎನೆಂದರೆ, ಯಾರು ಮಂತ್ರಿಯಾಗಬೇಕು, ಯಾರು ಮಂತ್ರಿಯಾಗಬಾರದು ಎನ್ನುವ ಸ್ವಾತಂತ್ರ್ಯ ಆಯಾ ರಾಜಕೀಯ ಪಕ್ಷಗಳಿಗಿದೆ. ಅದರಲ್ಲಿ ಮಧ್ಯೆ ಪ್ರವೇಶ ಮಾಡಲು ನಮಗೆ ಅಧಿಕಾರವಿಲ್ಲ. ಆದರೆ, ಮಾನ್ಯ ಸಿದ್ಧರಾಮಯ್ಯನವರು ಕುಳಿತಿರುವದರಿಂದ ಹೇಳುತ್ತಿದ್ದೇವೆ, ದಿಢೀರ್ ಎಂದು ಈ ರೀತಿ ಬದಲಾವಣೆಗಳು ಆಗುವಂಥಾದ್ದು ರಾಜ್ಯದಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಲೂ ಕಾರಣವಾಗಿದೆ ಮತ್ತು ಈ ಸರ್ಕಾರ ಒಟ್ಟಾಗಿ ಹೋಗವುದಕ್ಕೆ ಆಗುವುದಿಲ್ಲ ಎನ್ನುವ ಉಸಿರು ಕಟ್ಟುವಂಥ ಪರಿಸ್ಥಿತಿ ಇದೆ. ಐದನೇ ತಾರೀಖು ಅಧೀವೇಶನ ಮುಗಿಸಿಕೊಂಡು ಹೋದಮೇಲೆ ನಾವು ಎಷ್ಟು ದಿವಸ ಶಾಸಕರಾಗಿ ಇರುತ್ತೇವೋ, ಇಲ್ಲವೋ ಎನ್ನುವ ಆತಂಕದಲ್ಲಿ 224 ಜನ ಶಾಸಕರು ಹೋಗುವಂಥಾದ್ದು ಆಗುತ್ತಿದೆ ಮತ್ತು ನಾವು ಧೈರ್ಯದಿಂದ ವಿಶ್ವಾಸದಿಂದ ಕೆಲಸ ಮಾಡಲು ಆಗದೇ ಇರುವಂಥ, ಉಸಿರು ಕಟ್ಟುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಜನರು ಈ ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆಯೇ ವಿಶ್ವಾಸ

ಕಳೆದುಕೊಂಡು, ಇವರು ಸದನದೊಳಗೆ ಏನು ನಡೆಸಿದ್ದರೆ ಇವರಿಗೆ ಎನಾಗಿದೆ, ಇವರ ಸ್ವಾರ್ಥಕ್ಕಾಗಿ, ಕುರ್ಚಿಗಾಗಿ, ಯಾರು ಮುಖಂಡರಾಗಬೇಕು, ಯಾರಾಗಬಾರದು ಎನ್ನುವ ಅಂತಃಕಲಹದಲ್ಲಿ ಮುಳುಗಿ ಹೋಗಿದ್ದಾರೆ ಎನ್ನುವ ಭಾವನೆ ಬರುತ್ತಿದೆ. ಇಂಥ ಪರಿಸ್ಥಿತಿ ಕೇವಲ ಕಾಂಗ್ರೆಸ್ ನಲ್ಲಿದೆ ಅಥವಾ ಜೆ. ಡಿ. (ಎಸ್) ನಲ್ಲಿದೆ ಎನ್ನುವುದಲ್ಲ, ಎಲ್ಲಾ ಪಕ್ಷಗಳಲ್ಲೂ ಗೊಂದಲದ ವಾತಾವರಣ ವಿದೆ. ಇಂಥ ಒಂದು ಸಂದರ್ಭದಲ್ಲಿ ವಾಸ್ತವಿಕ ಸ್ಥಿತಿ ಏನು ಎನ್ನುವ ಬಗ್ಗೆ ಸಿದ್ಧರಾಮಯ್ಯನವರೇ ಇಲ್ಲಿರುವುದರಿಂದ, ಅವರು ಒಂದು ಹೇಳಿಕೆ ಕೊಡಲೇ ಬೇಕು. ನಾವು ಮುಖ್ಯಮಂತ್ರಿಗಳನ್ನು ದೂರಲು ಬರುವುದಿಲ್ಲ, ಅವರು ನಮಗೆ ನಿನ್ನೆಯೇ ಹೇಳಿದ್ದಾರೆ, ಭಾರೀ ಮಳೆಯಿಂದ ಉಂಟಾಗಿರುವ ಪ್ರವಾಹದಿಂದ ಆಗಿರುವವ ದುರಂತವನ್ನು ವೀಕ್ಷಿಸಲು ಹೆಲಿಕಾಪ್ಟರ್‌ನಲ್ಲಿ ಹೋಗಿದಾದರೆ ಅವರು ವಾಪಸ್ ಬಂದ ಮೇಲೆ ಒಂದು ಸ್ಟೇಟ್‌ಮೆಂಟ್ ಕೊಡಬಹುದು. ಆದರೆ, ಈಗ ಸಿದ್ಧರಾಮಯ್ಯನವರು ಇಲ್ಲಿ ಇರುವುದರಿಂದ ಮತ್ತು ಇವವತ್ತು ಹಣಕಾಸಿಗೆ ಸಂಬಂಧಪಟ್ಟ ಬಿಲ್‌ಗಳು ಪಾಸ್ ಆಗಬೇಕಾಗಿರುವುದರಿಂದ ಅವರು ಒಂದು ಹೇಳಿಕೆ ಕೊಡಲೇಬೇಕು. ಅವರು ಇನ್ನೂ ಹಣಕಾಸಿನ ಸಚಿವರು ಎಂದೇ ನಾವು ತಿಳಿದುಕೊಂಡಿದ್ದೇವೆ, ಉಪಮುಖ್ಯಮಂತ್ರಿಗಳು ಎಂದೇ ನಾವು ತಿಳಿದು ಕೊಂಡಿದ್ದೇವೆ. ಪತ್ರಿಕೆಗಳಲ್ಲಿ ಬಂದಿರುವಂಥಾದ್ದು ಅವರವರ ವಿಚಾರಕ್ಕೆ ಬಿಟ್ಟಿದ್ದು. ಆದರೆ, ವಾಸ್ತವಿಕವಾಗಿ ಇವತ್ತು ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದಾರೆಯೇ, ಇಲ್ಲವೇ, ಹಣಕಾಸಿನ ಸಚಿವರಾಗಿದ್ದಾರೆಯೇ, ಇಲ್ಲವೇ, ಬಿಲ್‌ಗಳನ್ನು ಪಾಸ್ ಮಾಡುವುದಕ್ಕೆ ಅವರು ಉತ್ತರ ಕೊಡುತ್ತಾರೋ, ಇಲ್ಲವೋ? ಉಸಿರು ಕಟ್ಟುವಂಥ ಈ ಒಂದು ಪರಿಸ್ಥಿತಿ ಏಕೆ ಬಂತು ಎನ್ನುವದನ್ನು ತಿಳಿದುಕೊಳ್ಳಬೇಕಾಗಿದೆ. ವಾಸ್ತವಿಕ ಅಂಶ ಏನು ಎನ್ನುವುದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವಂಥಾದ್ದು ಆಗಬೇಕು. ಯಡಿಯೂರಪ್ಪನವರೇ, ಪತ್ರಿಕೆಗಳಲ್ಲಿ ಬಂದಿರುವ ವಿಚಾರಗಳ ಬಗ್ಗೆ ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಿ, ನಾನು ಉಪ ಮುಖ್ಯಮಂತ್ರಿಯಾಗಿದ್ದೇನೆ, ನಾನು ಹಣಕಾಸು ಸಚಿವನಾಗಿದ್ದೇನೆ. ಸಚಿವರಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಪತ್ರಿಕೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದಂತೆ ಬೇಕಾದಷ್ಟು ಊಹಾಪೋಹಗಳು ಬರುತ್ತವೆ. ಅದಕ್ಕೆ ನೀವು ತಲೆ ಕೆಡಿಸಿಕೊಳ್ಳಬೇಡಿ, ಎಲ್ಲವೂ ಸರಿಯಿದೆ ಎನ್ನುವುದಾದರೆ, ಅದನ್ನಾದರೂ ಅವರು ಹೇಳಲಿ ಇದನ್ನು ಈ ಮನೆಯಲ್ಲಿರುವಂಥ ಸದಸ್ಯರು ಮತ್ತು ಈ ರಾಜ್ಯದ ಜನತೆ ತಿಳಿದುಕೊಳ್ಳಬೇಕಾದಂಥ ಅಧಿಕಾರವಿದೆ. ನಾವು ಪ್ರತಿ ಪಕ್ಷದಲ್ಲಿದ್ದುಕೊಂಡು ಎಲ್ಲವನ್ನೂ ಮೂಕಪ್ರೇಕ್ಷಕರಾಗಿ ನೋಡಿಕೊಂಡು ಕುಳಿತು ಕೊಳ್ಳಲು ಆಗುವುದಿಲ್ಲ. ನಿಮ್ಮ ಪಕ್ಷದೊಳಗೆ ಏನಾದರೂ ಭಿನ್ನಾಭಿಪ್ರಾಯ ಗಳಿದ್ದರೆ, ಅದನ್ನು ನಾಲ್ಕು ಗೋಡೆಗಳೊಳಗೆ ಪರಿಹರಿಸಿಕೊಳ್ಳಿ ನಿಮ್ಮ ಪಕ್ಷದ ಪದಾಧಿಕಾರಿಗಳನ್ನು, ಅಧ್ಯಕ್ಷರನ್ನು ಅಥವಾ ಮತ್ತೊಬ್ಬರನ್ನು ಬದಲಾವಣೆ ಮಾಡುವುದಾದರೆ ಅದು ನಮಗೇನೂ ಸಂಬಂಧವಿಲ್ಲ. ಆದರೆ ರಾಜ್ಯದ ಉಪಮುಖ್ಯಮಂತ್ರಿಗಳ ಸ್ಥಾನದ ಪ್ರಶ್ನೆ ಬಂದಾಗ, ಈಗ ಉಂಟಾಗಿರುವ ಗೊಂದಲದಿಂದ, ಮುಂದೆ ಬರುವಂಥ ದಿವಸಗಳಲ್ಲಿ ಈ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ದುಷ್ಪರಿಣಾಮವಾಗುತ್ತದೆ. ನಾವು ಶಾಸಕರಾಗಿ ಗೌರವದಿಂದ ಕೆಲಸ ಮಾಡಲು ಆಗದೇ ಇರುವಂಥ ಪರಿಸ್ಥಿತಿ ಇದೆ. ರಾಜಕೀಯ ಪಕ್ಷಗಳ ಮುಖಂಡರ ಬಗ್ಗೆಯೇ ಜನ ವಿಶ್ವಾಸ ಕಳೆದುಕೊಳ್ಳುವಂತಹ, ಸ್ವಾರ್ಥಕ್ಕಾಗಿ ಇವರು ಏನು ಬೇಕಾದರೂ

ಮಾಡಲು ಸಿದ್ಧ ಎನ್ನುವ ಒಂದು ಮೆಸೇಜ್ ಎನು ಇಲ್ಲಿಂದ ಹೊರಗಡೆ ಹೋಗುತ್ತಿದೆ. ಅದು ನಿಲ್ಲಬೇಕು, ಆದ್ದರಿಂದ, ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ, ವಾಸ್ತವಿಕ ಸ್ಥಿತಿ ಏನು ಎನ್ನುವ ಬಗ್ಗೆ ಸಿದ್ಧರಾಮಯ್ಯನವರು ಒಂದು ಸ್ಟೇಟ್‌ಮೆಂಟ್ ಮಾಡಿಬಿಟ್ಟರೆ. ನಾವು ಮುಂದಿನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬಹುದು. ಅಲ್ಟಿಮೇಟ್‌ಆಗಿ, ನಿಮ್ಮ ಮುಖಂಡರು ಯಾರು, ಯಾರು ಮಂತ್ರಿಯಾಗಬಾರದು, ಯಾರು ಮುಖ್ಯಮಂತ್ರಿಯಾಗಬೇಕು, ಯಾರು ಉಪಮುಖ್ಯಮಂತ್ರಿಯಾಗಬೇಕು, ನಿಮ್ಮ ನಾಯಕನ ಆಯ್ಕೆ ಮಾಡಿಕೊಳ್ಳುವಂಥಾದ್ದು, ಉಪ ನಾಯಕನ ಆಯ್ಕೆ ಮಾಡಿಕೊಳ್ಳುವಂಥಾದ್ದು, ಕ್ಯಾಬಿನೆಟ್‌ನಲ್ಲಿ ಯಾರಿರಬೇಕು, ಯಾರಿರಬಾರದು ಎನ್ನುವ ಸ್ವಾತಂತ್ರ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಮಗೆ ಇದೆ. ಆದರೆ ಸದನ ನಡೆಯುತ್ತಿರುವಂಥ ಕಾಲದಲ್ಲಿ, ಇನ್ನು ಮೂರು ದಿವಸಗಳಲ್ಲಿ ಅಧಿವೇಶನ ಮುಗಿಸಿ ನಾವು ವಾಪಸ್ಸು ಹೋಗುವಂಥ ಕಾಲದಲ್ಲಿ, ಈ ರೀತಿಯ ಪರಿಸ್ಥಿತಿ ಬಂದಾಗ ಮುಂದೇನಾಗುತ್ತದೆ ಎನ್ನುವ ಗೊಂದಲ ಉಂಟಾಗುತ್ತದೆ. ಇದರಿಂದ ಅಭಿವೃದ್ಧಿಗೆ ಧಕ್ಕೆಯಾಗುತ್ತದೆ, ರಾಜ್ಯದಲ್ಲಿ ಗೊಂದಲ ಉಂಟಾಗುತ್ತದೆ. ನಮಗೆ ಬೇಕಾದಂತಹ ಸಣ್ಣಪುಟ್ಟ ಸಮಿತಿಗಳನ್ನೂ ಇನ್ನೂ ಮಾಡಿಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು ವಿಜಿಲೆನ್ಸ್ ಕಮಿಟಿ ಮಾಡುತ್ತೇವೆ ಎಂದು ಹೇಳಿದಿರಿ. ಅದರೆ, ನಿಮ್ಮಲ್ಲೇ ಗೊಂದಲ ಇರುವುದರಿಂದ ಈ ನಿಮಿಷದವರೆಗೆ ಆ ಬಿಲ್ ಅನ್ನು ಇಲ್ಲಿ ತರುವುದಕ್ಕೆ ನಿಮಗೆ ಸಾಧ್ಯವಿಲ್ಲ ಸಮಿತಿಗಳನ್ನು ರಚನೆ ಮಾಡಿದ್ದೇವೆ ಎಂದು ಹೇಳಿದಿರಿ. ನಿಮಗೆ ಬೇಕಾದ 2530 ಕ್ಷೇತ್ರಗಳಲ್ಲಿ ನೀವು ಸಮಿತಿ ಮಾಡಿದ್ದೀರಿ. ಹಾಗಾದರೆ, ನಾವೆಲ್ಲಾ ಇಲ್ಲಿ ಇರುವುದು ಏತಕ್ಕಾಗಿ? ನಾವೇನು ಶಾಸಕರಲ್ಲವೇ? ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಗೌರವದಿಂದ ಕೆಲಸ ಮಾಡಬಾರದೇ? ಅವುಗಳನ್ನು ಮಾಡಬಾರದು ಎಂದು ನಿಮಗೆ ಇದೆ ಎಂದು ನಾನು ಹೇಳುವುದಿಲ್ಲ. ಆದರೆ ನಿಮಗೆ ಬಿಡುವಿಲ್ಲ. ನೀವು ನಿಮ್ಮದೇ ಆದಂಥ ಆಂತರಿಕ ಗೊಂದಲದಲ್ಲಿ ಕಳೆದ ನಾಲ್ಕು ತಿಂಗಳುಗಳಿಂದ ಇದ್ದೀರಿ. ಇದರಿಂದ ರಾಜ್ಯದ ಅಭಿವೃದ್ಧಿ ಕಾರ್ಯ ಸ್ಥಗಿತವಾಯಿತು. ರಾಜ್ಯದ ಬೊಕ್ಕಸದಲ್ಲಿ ಸಾವಿರಾರು ಕೋಟಿ ರೂಪಾಯಿ ಕೊಳೆಯುತ್ತಾ ಬಿದ್ದಿದೆ. ಅಭಿವೃದ್ಧಿ ಕಾರ್ಯಕ್ಕೆ ಅದು ವಿನಿಯೋಗವಾಗಲಿಲ್ಲ. ಶಾಸಕರ ನಿಧಿ ಎಂದು ಮಾಡಿದ್ದೀರಿ. ಅದರಿಂದಲೂ ಎಲ್ಲೂ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ, ಏಕೆಂದರೆ, ಅದನ್ನು ಕೆಲವರಿಗೆ ರಿಲೀಸ್ ಮಾಡಿಲ್ಲ. ಸುತ್ತೋಲೆಯಲ್ಲಿ ಗೊಂದಲ ಇಗ್ ಎಂದು ಹೇಳಿ ಡೆಪ್ಯೂಟಿ ಕಮೀಷನರುಗಳು ನಾವು ಕೊಟ್ಟಂಥ ಕಾಮಗಾರಿಗಳ ಪಟ್ಟಿಗೆ ಕ್ಲಿಯರೆನ್ಸ್ ಕೊಡುತ್ತಿಲ್ಲ. ಈಗ ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ಇರಬೇಕಾದರೆ, ಅದರಿಂದ ಈಗಾಗಲೇ ಹತ್ತಾರು ಜನ ಸತ್ತಿರಬೇಕಾದರೆ, ನೀವು ನಮಗೆ ಅಭಿವೃದ್ಧಿ ಕಾರ್ಯಗಳಿಗೆ ಸರಿಯಾಗಿ ಹಣವನ್ನು ಕೊಡದೇ, ನಮಗೆ ಭಿಕ್ಷೆ ಕೊಡುತ್ತೀರೇನು? ಒಂದೊಂದು ಜಿಲ್ಲೆಗೆ 1010 ಕೋಟಿ ರೂಪಾಯಿಗಳನ್ನು ಕೊಟ್ಟು ತರಾತುರಿಯಲ್ಲಿ ಕೆಲಸ ಮಾಡಬೇಕು ಎನ್ನುವುದನ್ನೂ ನಿಮಗೆ ಮಾಡುವುದಕ್ಕಾಗುವುದಿಲ್ಲ. ನೀವು ಎನಾದರೂ ಬಡಿದಾಡಿಕೊಂಡು ಸಾಯಿರಿ, ಅದಕ್ಕೂ ನಮಗೂ ಸಂಬಂಧವಿಲ್ಲ ಇದು ಈ ರಾಜ್ಯದ ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಬೀರುತ್ತಿದೆ. ನಿಮಗೆ ಎನಾಗಿದೆ? ವಾಸ್ತವಿಕ ಪರಿಸ್ಥಿತಿ ಏನು ಎನ್ನುವ ಬಗ್ಗೆ ಹಣಕಾಸಿನ ಸಚಿವರೂ ಆದ ಉಪ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರೆ ನಾವು ಶಾಂತವಾಗಿ ಮುಂದಿನ ಕಾರ್ಯಕಲಾಪಗಳನ್ನು ನಡೆಸಬಹುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಈ ಸದನ ಪ್ರಾರಂಭವಾದಾಗಿನಿಂದ ಸೂತಕದ ವಾತವರಣವಿದೆ, ಈ ಮನೆ ಒಂದು ತರಹ ಸೂತಕದ ಮನೆಯಾಗಿದೆ. ಇಲ್ಲಿ ಏನಾಗುತ್ತಿದೆ, ಏಕಾಗುತ್ತಿದೆ ಎನ್ನುವುದು ಯಾರಿಗೂ ಕೂಡ ಗೊತ್ತಿಲ್ಲಾ ಸರ್ಕಾರ ಯಾವತ್ತು ಬಿದ್ದು ಹೋಗುತ್ತದೋ, ಯಾವತ್ತು ನಾವಲ್ಲಾ ಮನೆಗೆ ಹೋಗಿಬಿಡುತ್ತೇವೋ ಎನ್ನುವಂಥ ವಾತಾವರಣ ನಿರ್ಮಾಣವಾಗಿದೆ. ನನಗೆ ಆಶ್ಚರ್ಯವಾಗಿರತಕ್ಕಂಥಾದ್ದು ಏನೆಂದರೆ, ಇವತ್ತು ಫ್ಲೋರ್ ಲೀಡರ್ ಯಾರು ಎನ್ನುವುದು. ಪ್ರಕಾಶ್‌ರವರಾ ಅಥವಾ ಸಿದ್ಧರಾಮಯ್ಯನವರಾ? ಏಕೆಂದರೆ, ಈ ಬಗ್ಗೆ ನಿನ್ನೆ ಜೆಡಿಎಲ್‌ಪಿ ಮೀಟಿಂಗ್‌ನಲ್ಲಿ ನಿರ್ಣಯವಾಗಿದೆ. ಇದು ಬಹಳ ಪ್ರಮುಖವಾಗಿರತಕ್ಕಂಥ ಒಂದು ವಿಚಾರ. ಆಡಳಿತ ನಡೆಸುವಂಥ ಒಂದು ಭಾಗಸ್ಥರು ಅವರು, ಆಡಳಿತದಲ್ಲಿ ಒಂದು ಪಾರ್ಟ್‌ನರ್ ಅವರು. ಹೀಗಿರುವಾಗ, ಬಹಳ ಪ್ರಮುಖವಾಗಿರತಕ್ಕಂಥ ಒಂದು ಅಂಗ ಇವರು. ಮೀಟಿಂಗಿನಲ್ಲಿ, ತನ್ನ ಫ್ಲೋರ್ ಲೀಡರ್ ಅನ್ನು ಬದಲಾವಣೆ ಮಾಡುತ್ತೇವೆ ಎಂದು ನಿರ್ಧಾರ ಮಾಡಲಾಗಿದೆ.

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ನಿನ್ನೆ ಜೆಡಿಎಲ್‌ಪಿಯ ಸಭೆಯಲ್ಲಿ.....

ಶ್ರೀ ಆರಗ ಜ್ಞಾನೇಂದ್ರ : ಒಂದು ನಿಮಿಷ, ನಾನು ಮುಗಿಸಿಬಿಡುತ್ತೇನೆ. ನಾನು ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ ....

ಅಧ್ಯಕ್ಷರು: ಮಾನ್ಯ ಜ್ಞಾನೇಂದ್ರ ಅವರೇ, ನಿಮ್ಮ ನಾಯಕರು ಎಲ್ಲವನ್ನು ಮಾತನಾಡಿದ್ದಾರೆ. ಹಿರಿಯ ಮುಖಂಡರುಗಳು ಮಾತನಾಡಿದ್ದಾರೆ. ಪತ್ರಿಕೆಗಳ ವರದಿ ಆಧಾರದ ಮೇಲೆ ಇಲ್ಲಿ ಎಲ್ಲವನ್ನೂ ಚರ್ಚೆ ಮಾಡಲು ಸಾಧ್ಯವಾಗುವುದಿಲ್ಲ. ಎಲ್ಲಾ ಪಕ್ಷಗಳಲ್ಲೂ ಆಂತರಿಕವಾದ ಬೆಳವಣಿಗೆ ಇರುತ್ತದೆ. ಈಗಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಉಪಮುಖ್ಯಮಂತ್ರಿಗಳಾಗಿದ್ದಾರೆ. ಅವರು ಉಪಮುಖ್ಯಮಂತ್ರಿಗಳಾಗಿ ಇಲ್ಲಿ ಕುಳಿತಿದ್ದಾರೆ. ಅವರು ಮತನಾಡುತ್ತಾರೆ. ದಯಾಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಎಲ್. ಧರ್ಮೇಗೌಡ : ಈ ಸದನದ ಸಮಯವನ್ನು ನೀವು ಹಾಳುಮಾಡುತ್ತಿದ್ದೀರಿ ಇಡೀ ಸದನದ ಸಮಯವನ್ನು ನೀವೇ ತೆಗೆದು ಕೊಳ್ಳುತ್ತೀರಿ. ಸರ್ಕಾರ ಬಿದ್ದು ಹೋಗುತ್ತದೆ, ಬಿದ್ದು ಹೋಗುತ್ತದೆ ಎಂದು ಹೇಳುತ್ತಾ ಸಮಯ ತೆಗೆದುಕೊಳ್ಳುತ್ತೀರಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ : ಪ್ರಮುಖವಾದಂಥ ಹಣಕಾಸು ಇಲಾಖೆಯನ್ನು ಅವರು ಹೊಂದಿದ್ದಾರೆ. ಅವರನ್ನು ಬದಲಾಯಿಸಬೇಕು ಎನ್ನುವ ವಿಷಯ ಬಂದಾಗ ಈ ರಾಜ್ಯದ ಜನತೆಗೆ ಆತಂಕ ಇದೆ.

ಅಧ್ಯಕ್ಷರು : ಹೌದು, ಈಗ ಅವರು ಮಾತನಾಡುತ್ತಾರೆ.

ಶ್ರೀ ಎಸ್. ಎಲ್. ಧರ್ಮೇಗೌಡ : ಮಾನ್ಯ ಅಧ್ಯಕ್ಷರೇ ದಯಾಮಾಡಿ ಹೇಳಿ, ವಿರೋಧ ಪಕ್ಷದ ನಾಯಕರು ಹೇಳಿರುವ ವಿಷಯಗಳನ್ನು ಬಿಟ್ಟು ಬೇರೆ ವಿಷಯಗಳನ್ನು ಹೇಳಲು ಅವರಿಗೆ ಹೇಳಿ ಅವರು ಹೇಳಿದ್ದುದನ್ನೇ ಇವರು ರಿಪೀಟ್ ಮಾಡುತ್ತಿದ್ದಾರೆ. ನೀವು

ಸಮಯ ಇಲ್ಲ ಎಂದು ಹೇಳುತ್ತೀರಿ. ಮಾನ್ಯ ಯಡಿಯೂರಪ್ಪನವರು ಹೇಳಿದ ಮಾತನ್ನೇ ಪುನಃ ಅವರು ಹೇಳುತ್ತಿದ್ದಾರೆ. ಅದನ್ನು ಬಿಟ್ಟು ಬೇರೆ ಹೇಳುವುದಕ್ಕೆ ಹೇಳಿ.

ಅಧ್ಯಕ್ಷರು : ಆಯಿತು ಎಲ್ಲರೂ ಮಾತನಾಡಿದ್ದಾರೆ, ಮತ್ತೆ ಮತ್ತೆ ಅದನ್ನೇ ಏಕೆ ಹೇಳುತ್ತೀರಿ. ಈಗ ಸಿದ್ಧರಾಮಯ್ಯನವರು, ನೀವು ಒಂದು ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ವಿರೋಧ ಪಕ್ಷಗಳ ಎಲ್ಲಾ ಮುಖಂಡರುಗಳು ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನೂ ಕೂಡ ಪತ್ರಿಕೆಗಳಲ್ಲೇ ಓದಿರುವುದು ನಿಮ್ಮ ತರಹವೇ ನಾನೂ ಪತ್ರಿಕೆಗಳಲ್ಲಿ ಓದಿದ್ದೇನೆ. ನನಗಿರತಕ್ಕಂಥಹ ಕಾನೂನಿನ ಜ್ಞಾನ ಮತ್ತು ನಮ್ಮ ಪಕ್ಷದ ರಾಜ್ಯಾಂಗದ ಬಗ್ಗೆ ನಾನು ತಿಳಿದುಕೊಂಡಿರುವ ಮಟ್ಟಿಗೆ ಶಾಸಕಾಂಗ ಸಭೆಯನ್ನು ಶಾಸಕಾಂಗ ಪಕ್ಷದ ನಾಯಕರೇ ಕರೆಯಬೇಕು. ನಾನು ಈಗಾಗಲೇ 4ನೇ ತಾರೀಖು ಸಭೆಯನ್ನು ಕರೆದಿದ್ದೇನೆ. ಅದು ಅಧಿಕೃತವಾದದ್ದು. ಆ ಬಗ್ಗೆ ನಮ್ಮ ಪಕ್ಷದ ಎಲ್ಲಾ ಸದಸ್ಯರುಗಳಿಗೆ ತಿಳುವಳಿಕೆ ಪತ್ರ, ಸಭೆಯ ನೋಟೀಸ್‌ಗಳು ಹೋಗಿವೆ. ನನ್ನನ್ನು ಬಿಟ್ಟು ಬೇರೆಯವರಿಗೆ ಸಭೆ ಕರೆಯಲಿಕ್ಕೆ ಕಾನೂನಿನಲ್ಲಿ ಅಧಿಕಾರವಿಲ್ಲ. ಆದ್ದರಿಂದ, ಪತ್ರಿಕೆಗಳಲ್ಲಿ ಬಂದಿರುವಂತೆ ಅಲ್ಲಿ ಸಭೆ ನಡೆದಿದೆ ಇಲ್ಲಿ ಸಭೆ ನಡೆದಿದೆ, ವರದಿಯಾಗಿದೆ ಎನ್ನತಕ್ಕಂಥಾದ್ದು ಮತ್ತು ಅಂಥ ಸಭೆಗಳಲ್ಲಿ ಆದಂಥ ನಡವಳಿಕೆಗಳೂ ಕೂಡ ಅಸಿಂಧುವಾಗುತ್ತದೆ. ಕಾನೂನಿನ ಪರಿಸ್ಥಿತಿ ಮತ್ತು ನಿಯಮಾವಳಿಗಳು ಹೇಗಿವೆ ಎನ್ನತಕ್ಕಂಥಾದ್ದನ್ನು ನಾನು ಉಲ್ಲೇಖ ಮಾಡಿ ಈಗಾಗಲೇ ಮಾನ್ಯ ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದೇನೆ. ಈಗಲೂ ನಾನು ಡೆಪ್ಯೂಟಿ ಚೀಫ್ ಮಿನಿಸ್ಟರೆ, ನಮ್ಮ ಪಕ್ಷದ ಶಾಸಕಾಂಗ ಸಭೆಯ ನಾಯಕನೇ ಅದರ ಬಗ್ಗೆ ನೀವ್ಯಾರೂ ಕೂಡ ಅನುಮಾನ ಇಟ್ಟುಕೊಳ್ಳಬೇಕಾದಂಥ ಅಗತ್ಯವಿಲ್ಲ ನಾನು ಡೆಪ್ಯೂಟಿ ಚೀಫ್ ಮಿನಿಸ್ಟರೇ, ಎಲ್ಲಾ ಆಗಿದ್ದೇನೆ. ಈಗಲೂ ನಾನು ಮಂತ್ರಿ ತರಹನೇ ಇದ್ದೇನೆ. ನೀವು ನನ್ನ ಹತ್ತಿರ ಬಂದು ಕೆಲಸ ಮಾಡಿಸಿ ಕೊಳ್ಳಲು ಪ್ರಯತ್ನ ಮಾಡಬಹುದು. ಆದ್ದರಿಂದ, ಇದರ ಬಗ್ಗೆ ನಾನು ಹೇಳಿಕೆ ಕೊಡಬೇಕಾದ ಸನ್ನಿವೇಶ ಬಂದರೆ, ಅಗತ್ಯ ಬಿದ್ದರೆ ಇವತ್ತೇ ಕೊಡುತ್ತೇನೆ. I will make a detailed statement, if necessary, to the House. ಸಾಧ್ಯವಾದರೆ ಇವತ್ತು ಮಾಡುತ್ತೇನೆ. ಆದರೆ, ಆ ಊಹಾಮೋಹಗಳು ಮತ್ತು ಅಸಿಂಧುವಾಗಿರತಕ್ಕಂಥ, ಕಾನೂನು ಬಾಹಿರವಾಗಿರತಕ್ಕಂಥ ನಡವಳಿಕೆಗೆ ಹೆಚ್ಚು ಮಹತ್ವ ಕೊಟ್ಟು ನಾನು ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಹೋಗುವುದಿಲ್ಲ. I am Deputy Chief Minister even now. I will continue to be the Deputy Chief Minister. I will continue to be the Finance Minister.

SRI J. C. MADHU SWAMY : we wish you to continue.

SRI SIDDARAMAIAH : Thank you.

ಶ್ರೀ ಆರ್. ಅಶೋಕ್ : ಪತ್ರಿಕೆಗಳಲ್ಲಿ ಎಂ. ಪಿ. ಪ್ರಕಾಶ್‌ರವರ ಫೋಟೋ ಬಂದಿದೆಯಲ್ಲಾ ಎಂ. ಪಿ. ಪ್ರಕಾಶ್‌ರವರ ಫೋಟೋವನ್ನು ಹಾಕಿ, ಅವರು ನಾಯಕರು ಎಂದು ದೊಡ್ಡದಾಗಿ ಫ್ರಂಟ್ ಪೇಜಿನಲ್ಲೇ ಹಾಕಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಅದನ್ನೇ ನಾನು ಆಗಲೇ ಹೇಳಿದ್ದು, ನಿಮ್ಮ ಹಾಗೇ ನಾನೂ ಆ ಫೋಟೋಗಳನ್ನೆಲ್ಲಾ ನೋಡಿದೆ ಎಂದು ಹೇಳಿದೆ. ಆಯಿತು, ಇಲ್ಲಿ ಮಾತನಾಡಿದೆ

ಎಂದು ಹೇಳಿ ನಾಳೆ ನೀವೂ ಒಂದು ಫೋಟೋ ಹಾಕಿಸಿಕೊಳ್ಳಿ. ಆದ್ದರಿಂದ, ಈಗ ಫೈನಾನ್ಸ್ ಬಿಲ್‌ಗಳನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಆಯಿತು, ಈಗ ಅಜೆಂಡಾ ಪ್ರಕಾರ ಹೋಗೋಣ. ಮೊದಲಿಗೆ ವರದಿಗಳನ್ನೊಪ್ಪಿಸುವುದು.

2. ವರದಿಗಳನ್ನೊಪ್ಪಿಸುವುದು :

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆಯಾದ ನಾನು ವೈದ್ಯಕೀಯ ಹಾಗೂ ನರ್ಸಿಂಗ್ ವಿದ್ಯಾರ್ಥಿ ನಿಲಯದ ಮಹಿಳಾ ನಿವಾಸಿಗಳ ಸಮಸ್ಯೆಗಳ ಕುರಿತು ನೀಡಿದ 1995–96ನೇ ಸಾಲಿನ ಸಮಿತಿಯ ಮೂರನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡು ಕ್ರಮಗಳ ಮೇಲಿನ ಅನುಸರಣಾ ವರದಿಯನ್ನು ಒಪ್ಪಿಸುತ್ತೇನೆ.

(ಆ) ಬೆಂಗಳೂರಿನ ಕೇಂದ್ರಿಯ ಕಾರಾಗೃಹದ ಮಹಿಳಾ ಖೈದಿಗಳ ಸ್ಥಿತಿಗತಿ ಕುರಿತು 1995–96ನೇ ಸಾಲಿನ ಸಮಿತಿಯ ಎರಡನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಮೇಲಿನ ಅನುಸರಣಾ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಗಳನ್ನೊಪ್ಪಿಸಲಾಯಿತು.

(3) ಶಾಸನ ರಚನೆ :

(1) ವಿಧೇಯಕಗಳ ಮಂಡನೆ

ಅ. ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹೆಚ್. ಕೆ. ಪಾಟೀಲ್: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 2005ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ;

"2005ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, "2005ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.